**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂ: 3613/2023 ಸಿ.ಡಬ್ಲ್ಯೂ –೫ ಪಿ.ಡಬ್ಲ್ಯೂ -೫

| | | |
|---|---|---|
| ಹೆಸರು | : | ಲಲಿತಾಬಾಯಿ |
| ತಂದೆ: ಗಂಡ | : | ಜ್ಯೋತಿರ್ಲಿಂಗ |
| ವಯಸ್ಸು | : | ೩೦ ವರ್ಷ |
| ಉದ್ಯೋಗ | : | ಹೊಲ ಮನೆ ಕೆಲಸ |
| ವಾಸಸ್ಥಳ | : | ಮಮದಾಪುರ |

ದಿನಾಂಕ:೨೮.೧೧.೨೦೨೪

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ :**

ಆರೋಪಿತರ ಪರಿಚಯ ಇರುತ್ತದೆ, ಅವರು ನಮ್ಮ ಅಣ್ಣ ತಮಕಿಯವರು. ಚಾಸಾ-1 ನನ್ನ ನೆಗೆಣಿ, ಚಾಸಾ-೪ ನನ್ನ ಭಾವ, ಚಾಸಾ-೬ ನನ್ನ ಅತ್ತೆ, ಚಾಸಾ-7 ನನ್ನ ಗಂಡ, ಚಾಸಾ-2, 8, 9 ರವರ ಪರಿಚಯ ಇರುತ್ತದೆ.

ದಿ.27.03.2023 ರಂದು ಜೋಳ ಕೀಳುತ್ತಿರುವ ಸಮಯದಲ್ಲಿ ನಾವು ಆರೋಪಿತರಿಗೆ ಹೋಗಿ ಜೋಳ ಕೀಳಬೇಡಿ ಎಂದು ಚಾಸಾ-೧ ರವರು ಹೇಳಿರುತ್ತಾರೆ. ನಮ್ಮ ಹೆಸರಿನಲ್ಲಿರುವ ಜಮೀನು ಕ್ಷೇತ್ರ 5 ಎಕರೆ ಆರೋಪಿತರ ಕಬ್ಜಾದಲ್ಲಿರುತ್ತದೆ, ಆರೋಪಿತರ ಹೆಸರಿನಲ್ಲಿರುವ 8 ಎಕರೆ ಜಮೀನು ನಮ್ಮ ಕಬ್ಜಾದಲ್ಲಿರುತ್ತದೆ. ನಾವು ಆರೋಪಿತರಿಗೆ ನಮ್ಮ ಕಬ್ಜಾದಲ್ಲಿರುವ ಜಮೀನು ಹೇಗೆ ಬೀಳಾ ಬಿದ್ದಿರುತ್ತದೆಯೋ ಹಾಗೆ ನಿಮ್ಮ ಕಬ್ಜಾದಲ್ಲಿರುವ ಜಮೀನನ್ನು ನೀವು ಸಹ ಕೂಡ ಬಿತ್ತು ಬೆಳೆ ಮಾಡಬೇಡಿ ಎಂದು ಹೇಳಿರುತ್ತೇವೆ.

ದಿ. 28.03.2023 ರಂದು ಆರೋಪಿತರೆಲ್ಲರೂ ನಮ್ಮ ಮನೆಗೆ ಬಂದು ಚಾಸಾ-೧ ರವರಿಗೆ ಹೊಡೆದಿರುತ್ತಾರೆ, ಚಾಸಾ-೧, ೪, ೬ ರವರಿಗೆ ಹೊಡೆ ಬಡೆ ಮಾಡಿರುತ್ತಾರೆ. ಚಾಸಾ-೧ ರವರಿಗೆ ಆರೋಪಿ ನಂ.೨ ಬಗ್ಗಿಸಿ ಹೊಡೆದಿರುತ್ತಾನೆ, ಆರೋಪಿ ನಂ.೬ ರವರು ಚಾಸಾ-೬ ರವರನ್ನು ಹೊಡೆದಿರುತ್ತಾರೆ. ಆರೋಪಿ ನಂ.3 ರಿಂದ 5 ರವರು ಚಾಸಾ-೪ ರವರಿಗೆ ಹೊಡೆದಿರುತ್ತಾರೆ, ಅವರ ಬಾಯಿಯಲ್ಲಿರುವ ಹಲ್ಲು ಉದುರಿರುತ್ತದೆ. ನನ್ನ ಮಗಳು ಸದರಿ ಘಟನೆಯನ್ನು ರೆಕಾರ್ಡ ಮಾಡಿಕೊಂಡಿರುತ್ತಾಳೆ, ಅದನ್ನು ಸಹ ಕೂಡ ನ್ಯಾಯಾಲಯಕ್ಕೆ ಸಲ್ಲಿಸು ಎಂದರೆ ಸಲ್ಲಿಸುತ್ತೇನೆ. ನಂತರ ಪೋಲಿಸ್ ಠಾಣೆಗೆ ಹೋಗಿದ್ದೆವು, ಅಲ್ಲಿ ಆಸ್ಪತ್ರೆಗೆ ಹೋಗಿ ಎಂದು ಹೇಳಿದರು, ಆಸ್ಪತ್ರೆಗೆ ಹೋಗಿ ತೋರಿಸಿಕೊಂಡು ಬಂದು ನಂತರ ಫಿರ್ಯಾದಿಯನ್ನು ಸಲ್ಲಿಸಿರುತ್ತೇವೆ.

*[ಈ ಹಂತದಲ್ಲಿ ಸ.ಅ.ಅ. ರವರು ಸದರಿ ವಿಡಿಯೋವನ್ನು ನ್ಯಾಯಾಲಯಕ್ಕೆ ಸೂಕ್ತ ಅರ್ಜಿಯೊಂದಿಗೆ ಸಲ್ಲಿಸುತ್ತೇವೆ ಎಂದು ಹೇಳಿ, ಮುಂದುವರೆದ ಮುಖ್ಯ ವಿಚಾರಣೆಗೆ ಅನುಮತಿಯನ್ನು ಕೋರಿರುತ್ತಾರೆ, ಅನುಮತಿಸಲಾಯಿತು].*

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.